




ವನ ಆಕರ್ಷಕ ಭಂಗಿಯಲ್ಲಿ ಬೆರಳು ಉಗುರಿನ ಸೊಗಸು ನೋಡುವಂತಿದೆ



ಅಲಂಕೃತ ಬೃಹದೀಶ್ವರ ದೇವ



20ನೇ ಶತಮಾನದ ಆದಿಯಲ್ಲಿ ತಂಜಾವೂರು ಸಂಸ್ಥಾನ ಆಳಿದ ಸರ್ಫೋಜಿ II



ತಂಜಾವೂರಿನ ಬೃಹದೀಶ್ವರ ದೇವಸ್ಥಾನ ಎದುರಿನ ಬೃಹತ್ ನಂದಿ ವಿಗ್ರಹ

ಸರಸ್ವತಿ ಮಹಲ್‌ನಲ್ಲಿ ಹೆಸರಿಗೆ ತಕ್ಕಂತೆ ಸರಸ್ವತಿಯ ಭಂಡಾರವೇ ಇದೆ. ಇದಕ್ಕೆ ಏಷ್ಯಾದ ಅತ್ಯಂತ ಹಳೆಯ ಗ್ರಂಥಾಲಯ ಎಂಬ ಖ್ಯಾತಿ ಇದೆ. ಇಲ್ಲಿ 60,000ಕ್ಕೂ ಹೆಚ್ಚು ಗ್ರಂಥಗಳು ಇವೆ ಎಂಬ ಪ್ರತೀತಿ ಇದ್ದರೂ ಪ್ರದರ್ಶನಕ್ಕೆ ಇಟ್ಟ ಗ್ರಂಥಗಳ ಸಂಖ್ಯೆ ಕಡಿಮೆ. 1918ರಲ್ಲಿ ಈ ಸಂಸ್ಥಾನ ಮಹಾರಾಜ ಸರ್ಫೋಜಿ II ಅವರ ಆಡಳಿತಕ್ಕೆ ಒಳಪಟ್ಟಿತು. ಈ ಗ್ರಂಥಾಲಯವನ್ನು ಅಭಿವೃದ್ಧಿಪಡಿಸುವಲ್ಲಿ ಅವರ ಪಾತ್ರ ಹಿರಿದು. ಅದಕ್ಕಾಗಿ 'ಮಹಾರಾಜ ಸರ್ಫೋಜಿ ಸರಸ್ವತಿ ಗ್ರಂಥಾಲಯ' ಎಂದು ಈಗ ಹೆಸರು ಬದಲಿಸಲಾಗಿದೆ. ಮಹಾರಾಜ ಸರ್ಫೋಜಿ ವಂಶಸ್ಥರು ಈಗ ಅರಮನೆಯಲ್ಲಿ ವಾಸವಾಗಿದ್ದಾರೆ. ಮರಾಠರಾದ ಕಾರಣ ಕೊಲ್ಲಾಪುರದ ಮನೆತನದ ಜತೆಗೆ ಅವರು ಈಗ ಬೀಗತನ ಮಾಡಿಕೊಂಡಿದ್ದಾರೆ! ಅರಮನೆಯ ಪ್ರತಿನಿಧಿ ನಮ್ಮ ಜತೆಗೆ ಇದ್ದಾಗಲೂ ಸರಸ್ವತಿ ಮಹಲ್‌ನಲ್ಲಿ ಚಿತ್ರ ತೆಗೆಯಲು ಅವಕಾಶ ಸಿಗಲಿಲ್ಲ!

ಪಕ್ಕದಲ್ಲಿ ಆರ್ಟ್ ಗ್ಯಾಲರಿಗೆ ಅವರು ನಮ್ಮನ್ನು ಕರೆದುಕೊಂಡು ಹೋದರು. ಅಲ್ಲಿನ ಕಂಚಿನ ವಿಗ್ರಹಗಳು ಒಂದಕ್ಕಿಂತ ಒಂದು ಮುದ್ದಾಗಿವೆ, ಅಪೂರ್ವ ಎನ್ನುವಂತೆ ಇವೆ. ಅಲ್ಲಿ ಇರುವ ಎಲ್ಲ ಶಿಲ್ಪಗಳು ಚೋಳರ ಕಾಲದವು. ಇಲ್ಲಿರುವ ಶಿವ, ಶಿವಕಾಮಿ ಹಾಗೂ ಅವರಿಗೆ ಸಂಬಂಧಿಸಿದ ಕಂಚಿನ ವಿಗ್ರಹಗಳನ್ನು ನೋಡಿ ಆನಂದಿಸಲು ಎರಡು ಕಣ್ಣು ಸಾಲವು. ಚಿತ್ರ ತೆಗೆಯಬಹುದೇ ಎಂದು ಕೇಳಿದೆ. 'ಇಲ್ಲಿ ಅವಕಾಶ ಇದೆ. ಸರಸ್ವತಿ ಮಹಲ್‌ನಲ್ಲಿ ಇಲ್ಲ' ಎಂದು ಅವರು ಒಪ್ಪಿದರು. ಹಾಗೆ ನೋಡಿದರೆ ಬೃಹದೀಶ್ವರ ದೇವಸ್ಥಾನದಲ್ಲಿಯೂ ಚಿತ್ರ ತೆಗೆಯಲು ಅವಕಾಶ ಕೊಡುವುದಿಲ್ಲ. ಪೂಜೆ ಮಾಡಿದ ನಂತರ ಅಲ್ಲಿನ ಅರ್ಚಕರೇ ಚಿತ್ರಗಳನ್ನು ಬಿಡುಗಡೆ ಮಾಡುತ್ತಾರೆ.



ದೇವಾಲಯದ ಗಂಟೆ

ಆರ್ಟ್ ಗ್ಯಾಲರಿಯ ನಟರಾಜ ಪ್ರತಿಮೆಯ ಭಂಗಿ ಅತ್ಯಪೂರ್ವವಾದುದು. ಅಪಸ್ಮಾರ ಎಂಬ ಕುಳ್ಳನ ಮೇಲೆ ಬಲಗಾಲನ್ನು ಇರಿಸಿ ಬಲಗೈಯಲ್ಲಿ ಡಮರು ಮತ್ತು ಎತ್ತಿದ ಎಡಗೈಯಲ್ಲಿ ಅಗ್ನಿ ಹಿಡಿದು ಪ್ರಭಾ (ಅಗ್ನಿ) ಮಂಡಲದ ನಡುವೆ ನೃತ್ಯ ಮಾಡುವ ಶಿವನ ನಟರಾಜ ಭಂಗಿ ತಾಂಡವ ನೃತ್ಯದ್ದು. ಈ ಭಂಗಿಯೇ ಭರತನಾಟ್ಯಕ್ಕೆ ಜನ್ಮ ನೀಡಿತು ಎಂಬ ಪ್ರತೀತಿ ಇದೆ. ಶಿವನ ಕಾಲಿನಡಿ ಇರುವ ಅಪಸ್ಮಾರ ಎಂಬ ಕುಳ್ಳ ಅಜ್ಞಾನದ ಪ್ರತೀಕ. ಎತ್ತಿದ ಎಡಗಾಲು ಸ್ವಾತಂತ್ರ್ಯದ ಪ್ರತೀಕ. ಲೌಕಿಕದ ಜಂಜಡದ ಸಂಕೇತವಾದ ಡಮರುವಿನ ನಾದದಿಂದ, ಪಾರಲೌಕಿಕದ ಸಂಕೇತವಾದ ಎಡಗೈನ ಅಗ್ನಿಯ (ತಪ) ಕಡೆಗೆ ಮನುಷ್ಯ ಚಲಿಸಬೇಕು ಎನ್ನುವುದು ನಟರಾಜ ಪ್ರತಿಮೆಯ ಅರ್ಥ ಎಂದು ವಿಶ್ಲೇಷಿಸುತ್ತಾರೆ. ಏಕಪಾದದ (ಶಿವನಿಗೆ ಏಕಪಾದ ಎಂಬ ಹೆಸರೂ ಇದೆ!) ಮೇಲೆ ಸಮತೋಲ ಸಾಧಿಸುವ ನಟರಾಜ ವಿಗ್ರಹದ ಕೆತ್ತನೆ ಒಂದು ಶ್ರೇಷ್ಠ ದರ್ಜೆಯ ಕುಸುರಿ ಕಲೆಗೆ ನಿದರ್ಶನ. ನಿಲುವಿನಲ್ಲಿ ಕಾಣುವ ಆ ಸಮತೋಲ ಶಿಲ್ಪದಲ್ಲಿ ಸಾಧಿತವಾಗಿರುವುದು ಅಚ್ಚರಿ ಮೂಡಿಸುತ್ತದೆ. ಇದು ಎಲ್ಲ ನಟರಾಜ ವಿಗ್ರಹ ಮತ್ತು ಪ್ರತಿಮೆಗಳಿಗೆ ಸಲ್ಲುವ ಶ್ರೇಯ.

ರುಮಾಲು ಸುತ್ತಿಕೊಂಡು ನಿಂತಂತೆ ಕಾಣುವ ಶಿವನ ಒಂದು ಭಂಗಿಯಲ್ಲಿ ಬಲಗೈ ಕೆಳಗೆ ಏನೋ ಆಸರೆ ಇದ್ದಂತೆ ಅನಿಸುತ್ತದೆ. ಆದರೆ, ಅದು ಇಲ್ಲ. ಎಡಗೈಯನ್ನು ಸೊಂಟದಿಂದ ಸ್ವಲ್ಪ ಕೆಳಗೆ ಇರಿಸಿದ್ದಾನೆ. ಪ್ರತಿಮೆಯ ಬೆರಳು ಚಲಿಸುತ್ತಿರುವಷ್ಟು ನೈಜವಾಗಿವೆ. ಉಗುರು ಎದ್ದು ಕಾಣುತ್ತವೆ. ಅದರ ಪಕ್ಕದ ಶಿವಕಾಮಿಯ ಶಿಲ್ಪವೂ ಅಷ್ಟೇ ನೈಜ, ಸಹಜ, ಸುಂದರ. ಆ ಶಿಲ್ಪದ ಸಮತೋಲವೂ ಅಷ್ಟೇ ಆಶ್ಚರ್ಯಕರ. ಶಿವಕಾಮಿ ಸುಂದರಿ ಎನ್ನುವುದು ತಮಿಳಿನಲ್ಲಿ ಪಾರ್ವತಿಯ ಹೆಸರು. ಶಿವನನ್ನು ಕಾಮಿಸಿದವಳು, ಶಿವನ ಜತೆಗೆ ಗಮಿಸಿದವಳು ಆಕೆ.

ಈ ಎಲ್ಲ ಮೂರ್ತಿಗಳು 7 ರಿಂದ 14ನೇ ಶತಮಾನದವರೆಗಿನ ರಾಜರ ಕಾಲದವು ಮತ್ತು ದೇವಸ್ಥಾನದ ಧಾರ್ಮಿಕ ಕ್ರಿಯೆಗಳಿಗೆ ಸಂಬಂಧಿಸಿದುವು. ಈಗ ಆ ಕ್ರಿಯೆಗಳು ನಿಂತು ಹೋಗಿರುವುದರಿಂದ ಈ ಗ್ಯಾಲರಿಯಲ್ಲಿ ಅವುಗಳನ್ನು ಸಂರಕ್ಷಿಸಿ ಇಡಲಾಗಿದೆ. ಇವು ಎಷ್ಟು ಅಮೂಲ್ಯ ಎಂದರೆ ಮಾಜಿ ಪ್ರಧಾನಿ ರಾಜೀವ ಗಾಂಧಿಯವರ ಆಪ್ತರೊಬ್ಬರು ಇಲ್ಲಿಗೆ ಭೇಟಿ ನೀಡಿದಾಗ, ಈ ಎಲ್ಲ ಪ್ರತಿಮೆಗಳನ್ನು ಕೊಟ್ಟು ಬಿಡಿ, ಎಷ್ಟು ಹಣ ಬೇಕು ಹೇಳಿ ಎಂದು ಅಲ್ಲಿದ್ದವರನ್ನು ಕೇಳಿದರಂತೆ! ಅವರು ನಕ್ಕು ಸುಮ್ಮನಾದರಂತೆ. ಇಂಥ ಕಲೆಗೆ ಬೆಲೆ ಕಟ್ಟಲು ಆಗುತ್ತದೆಯೇ? ಅಚ್ಚರಿಗೆ, ವಿಸ್ಮಯಕ್ಕೆ ಹೇಗೆ ಬೆಲೆ ಕಟ್ಟಲು ಸಾಧ್ಯ?

ಈ ಕಲಾ ಗ್ಯಾಲರಿಯಿಂದ ಹೊರಗೆ ಬಂದ ಮೇಲೆ ಅಲ್ಲಿ ಒಂದು ಅಂಗಡಿ ಇದೆ. ಅಲ್ಲಿ ನಿಮಗೆ ಈಗಿನ ಕಲಾವಿದರು ತಯಾರಿಸುವ ಚಂದದ ಡಾನ್ಸಿಂಗ್ ಡಾಲ್‌ಗಳು ಸಿಗುತ್ತವೆ. ■

